doc-5888
T-P-2

Reg No B G 155 15 11 72

In The State First Golden Jubilee Celebrated Paper 'Satyavadi' daily, Mysore 4

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂದರ್ಭಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದ್ದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪ

ಅಕ್ಕಿ ಮುಂತಾದುವುಗಳ ಆಮದಿಗೆ ಮಂತ್ರಿ ಚವಾಣ್ ಆಶ್ವಾಸನೆ

ಮೈಸೂರು ಪಿ. ಡಬ್ಲ್ಯು. ಡಿ.

ಟೆಂಡರ್‌ಪ್ರಕಟಣೆ

ನಂ. 25 ತಾ॥ 26-10-1972

ಈ ಕೆಳಗೆ ಕಂಡ ಕೆಲಸಗಳಿಗಾಗಿ ಕಾಲಂ ನಂ. 4 ರಲ್ಲಿ ನಮೂದಿಸಿರುವ ಸೂಕ್ತ ವರ್ಗದ ರಿಜಿಸ್ಟರ್‌ಆದ ಕಂಟ್ರಾಕ್ಟರುಗಳಿಂದ ವಿಧಾಯಕವಷಿದ ಫಾರಂಗಳಲ್ಲಿ ದ್ವಿಪ್ರತಿಗಳಲ್ಲಿ ಮೊಹರಾದ ಟೆಂಡರುಗಳನ್ನು ಆಹ್ವಾನಿಸಲಾಗಿದೆ ಮತ್ತು 17 ನೇ ನವೆಂಬರ್ 72 ನೇ ಶುಕ್ರವಾರ ಮಧ್ಯಾಹ್ನ 4 ಗಂಟೆವರೆಗೆ, ಚಾಮರಾಜನಗರದಲ್ಲಿರುವ, ಚಾಮರಾಜನಗರ ವಿಭಾಗದ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರಿಂದ ಸ್ವೀಕರಿಸಲ್ಪಡುವುವು. ಸಾಧ್ಯವಾದರೆ ಆ ದಿನ, ಹಾಜರಿರಬಯಸುವ ಟೆಂಡರ್‌ದಾರರು ಅಥವಾ ಅವರ ಪ್ರತಿನಿಧಿಗಳ ಎದುರು ಅವನ್ನು ತೆರೆಯಲಾಗುವುದು. 13-11-1972 ರಿಂದ 16-11-1972 ರವರೆಗೆ ಕೆಲಸದ ಎಲ್ಲಾ ದಿನಗಳಲ್ಲೂ ಕೆಲಸದ ವೇಳೆಗಳಲ್ಲಿ ಫಾರಂಮಾರಾಟಕ್ಕೆ ವಿಧಾಯಕವಾಗಿರುವ (ಪಾವಸ್ಸು ಮಾಡಲಾಗದ, ಹಣವನ್ನು ಪಾವತಿ ಮಾಡಿದಲ್ಲಿ ಖಾಲಿ ಟೆಂಡರು ಫಾರಂಗಳನ್ನು ಕೊಡಲಾಗುವುದು ಯಾವುದೇ ಕಾರಣಗಳನ್ನು ಕೊಡದೆ ಯಾವುದೇ ಅಥವಾ ಎಲ್ಲಾ ಟೆಂಡರುಗಳನ್ನು ನಿರಾಕರಿಸುವ ಹಕ್ಕು ತಕ್ಕ ಅಧಿಕಾರಿಗಳಿಗೆ ಮಾತ್ರ ಇದೆ. ಕೆಲಸದ ಎಲ್ಲಾ ದಿನಗಳಲ್ಲೂ ಕಛೇರಿ ವೇಳೆಗಳಲ್ಲಿ, ಚಾಮರಾಜನಗರದಲ್ಲಿರುವ ಚಾಮರಾಜನಗರ ವಿಭಾಗದ ಎಕ್ಸಿಕ್ಯುಟಿವ್ ಇಂಜಿನಿಯರ್ ರವರಿಂದ ಹೆಚ್ಚು ವಿವರಗಳನ್ನು ಪಡೆಯಬಹುದು.

ಕೆಲಸದ ಹೆಸರು	1. ಪುಂಜೂರಿನ ಹಶ್ತಿರ ಸುವರ್ಣಾವತಿ ನದಿಗೆ ಅಡ್ಡಲಾಗಿ ಪಿಕ್‌ಅಪ್ ನಿರ್ಮಾಣ ಮಾಡುವುದು (ಉಳಿಕೆ ಕೆಲಸಗಳು)
ಟೆಂಡರಿಗೆ ಇಟ್ಟಿರುವ ಅಂದಾಜು ಮೊತ್ತ	ರೂ. 81200/-
ಇ. ಎಂ. ಡಿ	ರೂ. 2030/-
ಟೆಂಡರ್ ಸಲ್ಲಿಸಬಹುದಾದ ಕಂಟ್ರಾಕ್ಟರ ವರ್ಗ	3 ಮತ್ತು ಮೇಲ್ಪಟ್ಟು
ಟೆಂಡರ್ ಫಾರಂಗಳ ದರ	ರೂ 5-15
ಮುಗಿಸಲು ಕಾಲಾವಧಿ	8 ತಿಂಗಳು

ಸಹಿ/-
ಎಕ್ಸಿಕ್ಯುಟಿವ್ ಇಂಜಿನಿಯರ್
ಚಾಮರಾಜನಗರ ವಿಭಾಗ

ವಿಶ್ವಸಂಸ್ಥೆ ಖರ್ಚು

ವಿಶ್ವಸಂಸ್ಥೆ — 1973 ರಲ್ಲಿ ನೌಕರರ ಸಂಬಳ ಮತ್ತಿತರ ಪ್ರಯೋಜನಗಳಿಗಾಗಿ ವಿಶ್ವಸಂಸ್ಥೆ ಆಡಳಿತ ಮತ್ತು ಬಡ್ಜೆಟ್‌ನ ಸಮಿತಿಯು 122 ಮಿಲಿಯ ಡಾಲರು (ಸುಮಾರು 90 ಕೋಟಿ) ಖರ್ಚನ್ನು ಅನುಮೋದಿಸಿದೆ.

★

ವ್ಯವಸಾಯ ಮಂತ್ರಿಯರ ರಾಜೀನಾಮೆ

ನವದೆಹಲಿ— ಲೋಕಸಭೆಯಲ್ಲಿ ಅವಸರ ಸೂಚನೆ ಮಂಡಿಸುತ್ತಾ, ಕಮ್ಯೂನಿಸ್ಟು ಸದಸ್ಯ ಶ್ರೀ ಎಸ್. ಎಂ. ಬ್ಯಾನರ್ಜಿಯವರು, ಸರಕಾರ ಬೆಲೆ ರೇಖೆ ಹಿಡಿಯದಿದ್ದುದನ್ನು ಖಂಡಿಸಿ, ವ್ಯವಸಾಯ ಮಂತ್ರಿ ಶ್ರೀ ಫಕ್ರುದ್ದೀ ಅಹಮದ್‌ರವರ ರಾಜೀನಾಮೆಗೆ ಕೇಳಿಕೆ ಹಾಕಿದರು.

ಮುನ್ನೆಚ್ಚರಿಕೆ ಬಂಧನ

ಮದರಾಸು— ಇಂದು ಏರ್ಪಡಿಸಲಾಗಿರುವ ತಮಿಳುನಾಡು ಬಂದ್ ಸಂದರ್ಭದಲ್ಲಿ ಮುನ್ನೆಚ್ಚರಿಕೆಯಾಗಿ ನಿನ್ನೆ 1000 ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಗಿದೆ; ಮತ್ತು ನಗರದಲ್ಲಿ ಹೆಚ್ಚು ಬಂದೋಬಸ್ತು ಮತ್ತು ಉಸ್ತುವಾರಿ ಏರ್ಪಡಿಸಲಾಗಿದೆ ಎಂದು ಪೋಲೀಸು ಕಮಿಷನರರು ಪತ್ರಿಕೆಯವರಿಗೆ ತಿಳಿಸಿದರು.

2 ನೇ ತರಗತಿ ರಜಾ

ನವದೆಹಲಿ— ರೈಲುಗಳಲ್ಲಿನ 2 ನೇ ತರಗತಿಯನ್ನು ತೆಗೆದುಹಾಕಲಾಗುವದೆಂದು ಸ್ಪಷ್ಟವಾಗಿದೆ

★

ರೂ. 20 ನೋಟು

ನವದೆಹಲಿ— ರೂ. 20 ನೋಟುಗಳನ್ನು ಚಲಾವಣೆಯಿಂದ ತೆಗೆದುಹಾಕುವ ಯೋಚನೆ ಸರಕಾರಕ್ಕಿಲ್ಲವೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

○

ಅಸ್ಸಾಂ ಗಲಭೆಗಳು

ನವದೆಹಲಿ— ಅಸ್ಸಾಂನಲ್ಲಿಯ ಈಚಿನ ಗಲಭೆಗಳಲ್ಲಿ ಸಿಐಎ ಸೇರಿ ವಿದೇಶೀ ಸಂಸ್ಥೆಗಳ ಕೈವಾಡವಿತ್ತೆಂದು ಕಾಂಗ್ರೆಸ್, ಕಮ್ಯೂನಿಸ್ಟರು, ಮಾರ್ಕ್ಸಿಸ್ಟರು ಲೋಕಸಭೆಯಲ್ಲಿ ಆರೋಪಿಸಿದರು.

— ಬೆಲೆ ಸೂಚಿ —

1963 ರಲ್ಲಿ 100 ಇದ್ದದ್ದು
1972 ರಲ್ಲಿ 220 ಆಗಿರುವುದು
ಗಮನಾರ್ಹವು

ಮಕ್ಕಳ ದಿನಾಚರಣೆ

ಮೈಸೂರು— ಪುರಸಭೆ ಮತ್ತು ವಿದ್ಯಾಭ್ಯಾಸ ಇಲಾಖೆ ಆಶ್ರಯದಲ್ಲಿ ನಿನ್ನೆ ಮಕ್ಕಳ ದಿನ ಆಚರಿಸಲಾಯಿತು — ಲಾಲಿಯಲ್ಲಿ ನೆಹ್ರೂ ಭಾವಚಿತ್ರದೊಡನೆ ಮಕ್ಕಳ ರ್ಯಾಲಿ ನಡೆಯಿತು — ಸಂಜೆ ಶ್ರೀಮನ್ಮಹಾರಾಜರವರ ಪುತ್ರಿ ರಾಜಕುಮಾರಿ ವಿಶಾಲಾಕ್ಷಿಯವರ ಅಧ್ಯಕ್ಷತೆಯಲ್ಲಿ ಟೌನ್ ಹಾಲ್‌ನಲ್ಲಿ ಸಭೆ ನಡೆಯಿತು — 'ಕಿತೋರ ಕಿರಣ" ಸಂಚಿಕೆ ಬಿಡುಗಡೆ ಮಾಡಲಾಯಿತು.

★

ಬೆಲೆ ರೇಖೆ

ನವದೆಹಲಿ— ಲೋಕಸಭೆಯಲ್ಲಿ ಅರ್ಥ ಮಂತ್ರಿ ಶ್ರೀ ಚವಣರು ಬೆಲೆ ರೇಖೆ ಸಾಧಿಸುವ ನಿರ್ಧಾರವನ್ನು, ಅವಶ್ಯಕಬಿದ್ದರೆ ಜನತೆಗೆ ಸರಬರಾಜಿಗಾಗಿ, ಅಕ್ಕಿ, ಬೇಳೆ, ಗೋಧಿಯನ್ನು ಆಮದುಮಾಡಿಕೊಳ್ಳಲಾಗುವುದೆಂದೂ ತಿಳಿಸಿದ ನಂತರ, ವಿರೋಧಿಗಳು ತಂದಿದ್ದ ಅವಸರದ ಸೂಚನೆಯು 185-34 ಓಟುಗಳಿಂದ ಬಿದ್ದು ಹೋಯಿತು.

ಮತ್ತೆ ಸಾಲ

ನವದೆಹಲಿ— ಸರಕಾರ ಮತ್ತೊಂದು ರೂ. 100 ಕೋಟಿ ಸಾಲ ಎತ್ತಲು ನಿರ್ಧರಿಸಿದೆ.

★

ಮಿಲಿಟರಿ ನಿಲ್ದಾಣಗಳು

ವಾಷಿಂಗ್ಟನ್— ಸರಕ್ಕಾರವು ಹಣ ಮಿಗಿಸಲು ಅನೇಕ ಮಿಲಿಟರಿ ನಿಲ್ದಾಣಗಳನ್ನು ಮುಚ್ಚಬೇಕಾದೀತೆಂದು ಹೇಳಲಾಗಿದೆ.

○

ಸಭಾ ಪರಿತ್ಯಾಗ

ನವದೆಹಲಿ— ಲೋಕಸಭೆಯಲ್ಲಿ ಸ್ಪೀಕರರು ಶ್ರೀ ಜ್ಯೋತಿ ಬಸುರನ್ನು 2 ದಿವಸ ಸಸ್ಪೆಂಡು ಮಾಡಿದರು — ವಿರೋಧ ಪಕ್ಷಗಳವರೆಲ್ಲಾ ಸಭಾಪರಿತ್ಯಾಗ ಮಾಡಿದರು.

○

ಸಾರಾಯಿ ವಶ

ಮೈಸೂರು— ಆಟೋರಿಕ್ಷಾದಲ್ಲಿ 42 ಲಿಟರ್ ಸಾಗಿಸುತ್ತಿದ್ದ ತಕ್ಸೀರಿಗಾಗಿ ಒಬ್ಬನಿಗೆ 3 ತಿಂಗಳು ಕಠಿಣ ಸಜಾ ಮತ್ತು ರೂ. 100 ಜುಲ್ಮಾನೆ ವಿಧಿಸಲಾಯಿತು.

● ಬ್ರಿಡ್ಜ್‌ಟೌನ್— 1976 ರಲ್ಲಿ ಭಾರತದ ಕ್ರಿಕೆಟ್ ತಂಡವು ವೆಸ್ಟ್ ಇಂಡೀಸ್‌ನಲ್ಲಿ ಪ್ರವಾಸ ಮಾಡಲು ಒಪ್ಪಿರುವುದೆಂದು ವೆಸ್ಟ್ ಇಂಡೀಸ್ ಕ್ರಿಕೆಟ್ ಬೋರ್ಡು ತಿಳಿಸಿದೆ

ಭೂಸೇನೆ ಪ್ರಗತಿ

ಬೆಂಗಳೂರು— 71-72 ರಲ್ಲಿ ರಾಜ್ಯ ಸರಕಾರ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಭೂಸೇನೆ ಯೋಜನೆಯ ಮೇರೆಗೆ ಸುಮಾರು 8.07ಲಕ್ಷ ರೂ. ವೆಚ್ಚದಲ್ಲಿ 9 ಕಾರ್ಯ ಕೈಗೊಂಡಿತ್ತು ; ಮಾರ್ಚ್ 1972 ರ ಅಂತ್ಯದವರೆಗೆ ಈ ಕೆಲಸಗಳಿಗಾಗಿ 16991 ರೂ. ವಿನಿಯೋಗಿಸಿದೆ – 72 73 ರಲ್ಲಿ ಈ ಯೋಜನೆಗಾಗಿ ರೂ. 483800 ಮಂಜೂರ್ಮಾಡಿದ್ದು, ಅದರಲ್ಲಿ 265000 ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ; ಕೆಲಸಗಳಲ್ಲಿ ಅನೇಕರು ತೊಡಗಿದ್ದಾರೆ

ವಿಮಾಂದಾಲೋಚನೆ ಕಾರ್ಯ

ನವದೆಹಲಿ– ಅಂಚೆ ಪದಾರ್ಥಗಳಲ್ಲಿ ಸ್ಫೋಟಕ ವಸ್ತುಗಳನ್ನು ಪತ್ತೇಮಾಡಲು ಪರಿಣಾಮಕಾರಿ ಮಾರ್ಗ ತಿಳಿಯಲು ಭಾರತವು ಸ್ವಿಡ್ಜರ್ಲೆಂಡಿನ ಯೂನಿವರ್ಸಲ್ ಪೋಸ್ಟ್ ಯೂನಿಯನ್ನಿನೊಡನೆ ವ್ಯವಹರಿಸುತ್ತಿದೆ.

ವುಡ್‌ಲಾಂಡ್ ಅವೋಘ 7 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ

ಹಿಂದಿ ಕಲರ್ ಅತ್ಯದ್ಭುತ ಚಿತ್ರ

ಜವಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ 10-30 ಮೇಯರ್ ಮುತ್ತಣ್ಣ

ಅಪೂರ್ವ 5 ನೇ ವಾರ

ಬಾಂಧವ್ಯ

ಪಾತ್ರ – ಅಶ್ವಥ್, ಗಂಗಾಧರ್, ರಾಜೇಶ್, ಬಿ. ವಿ. ರಾಧ, ಸುಂದರೀಬಾಯಿ, ಸಂಧ್ಯಾರಾಣಿ, ಜಯಶ್ರೀ, ರಮಾದೇವಿ ದಿನ 3 ಪ್ರದರ್ಶನಗಳು

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸೂಕ್ತಿನ' ಕಲ್ಪನೆ
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
—ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

ಆನೆ - ಹುಡುಗ

ಭಾರತದಲ್ಲಿ ಗೋವಧೆ ಪೂರ್ಣ ನಿಷೇಧವಾಗಲಿ

Edited Printedand Published by Dharmapracharanirata M S Krishna Rao (Propretor) at the Satyavad. Press, Chamarajapuram Mysore

ಮೈಸೂರು ದಸರಾ ವಸ್ತುಪ್ರದರ್ಶನ

ಮತ್ತು

ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 16-11-1972 ಗುರುವಾರ

ಕಲಾಕ್ಷೇತ್ರ

5-30 ರಿಂದ 7 ಸಂಜೆ	ಶ್ರೀ ಎಸ್. ಮಹದೇವಪ್ಪ, ಮೈಸೂರು	ಪಿಟೀಲು
7 ರಿಂದ 9-30	ಮೈಸೂರು ಎಲೆಕ್ಟ್ರಿಸಿಟಿ ಬೋರ್ಡ್ ನೌಕರರ ಸಂಘ, ಬೆಂಗಳೂರು	ನಾಟಕ "ಮಾತೃದೇವೋಭವ"

ಜೀವನರಾಯನಕಟ್ಟೆ

6 ರಿಂದ 7	ಶ್ರೀಮತಿ ಟಿ ಎಸ್. ಬೃಂದ, ಮೈಸೂರು	ಸಂಗೀತ
7 ರಿಂದ 9-30	ಶ್ರೀ ಅಮೃತೇಶ್ವರ ಯಕ್ಷಗಾನ ಮಂಡಳಿ, ಕೋಶ, ದಕ್ಷಿಣ ಕನ್ನಡ	ಯಕ್ಷಗಾನ

ಹೆಚ್. ಆರ್. ಗಂಗಣ್ಣ;
ಕಾರ್ಯದರ್ಶಿ, ದಸರಾ ವಸ್ತುಪ್ರದರ್ಶನ ಸಮಿತಿ, ಮೈಸೂರು

SHAKTI SUDHA

A Superb Tonic

Help The Gorakshana

—Humanitarian Propoganda Monthly—

Protect the Cow

Contribute Liberally to the National Defence Fund